ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-11-1993

# *ಸಹಜ ಸಿದ್ದಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದಕ್ಕೆ ಜ್ಞಾನಸ್ವರೂಪ ಪ್ರಯೋಗಿ ಆತ್ಮರಾಗಿ*

(सहज सिद्धि प्राप्त करने के लिए ज्ञान स्वरूप प्रयोगी आत्मा बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಸುಖ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಯೋಗ ಪ್ರಯೋಗದ ವಿಧಿಯನ್ನು ತಿಳಿಸುವ ಜ್ಞಾನದಾತ ತಂದೆ ತನ್ನ ಜ್ಞಾನಿ ಆತ್ಮದೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಜ್ಞಾನದಾತಾ ವರದಾತಾ ತಮ್ಮ ಜ್ಞಾನಿ ಆತ್ಮರನ್ನು, ಯೋಗಿ ಆತ್ಮ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗು ಎಲ್ಲಿಯವರೆಗೆ ಜ್ಞಾನಸ್ವರೂಪ ಹಾಗು ಯೋಗಯುಕ್ತರು ಆಗಿದ್ದೀರಿ? ಜ್ಞಾನವನ್ನು ಕೇಳುವುದಕ್ಕೆ ಹಾಗು ತಿಳಿಸುವುದಕ್ಕೆ ನಿಮಿತ್ತರಾಗಿದ್ದೀರಾ ಅಥವಾ ಜ್ಞಾನ ಸ್ವರೂಪರಾಗಿದ್ದೀರಾ? ಸಮಯ ಪ್ರಮಾಣ ಯೋಗವನ್ನು ಜೋಡಿಸುವಂತಹವರಾಗಿದ್ದೀರಾ ಅಥವಾ ಸದಾ ಯೋಗಿ ಜೀವನ ಅರ್ಥಾತ್ ಪ್ರತಿಯೊಂದು ಕರ್ಮದಲ್ಲಿ ಯೋಗಯುಕ್ತ, ಯುಕ್ತಿಯುಕ್ತ ಸ್ವತಃ ಅಥವಾ ಸದಾ ಕಾಲದ ಯೋಗಿಗಳಾಗಿದ್ದೀರಾ? ಯಾವುದೇ ಬ್ರಾಹ್ಮಣ ಆತ್ಮನನ್ನು ಯಾರಾದರೂ ಜ್ಞಾನಿ ಹಾಗು ಯೋಗಿಗಳಾಗಿದ್ದೀರಾ ಎಂದು ಕೇಳಿದಾಗ ಏನು ಹೇಳುತ್ತೀರಿ? ಎಲ್ಲರೂ ಜ್ಞಾನಿ ಹಾಗು ಯೋಗಿಗಳಾಗಿದ್ದೀರಲ್ಲವೇ. ಜ್ಞಾನಸ್ವರೂಪರಾಗುವುದು ಅರ್ಥಾತ್ ಪ್ರತಿ ಸಂಕಲ್ಪ, ಮಾತು ಹಾಗೂ ಕರ್ಮ ಸಮರ್ಥವಾಗಿರುತ್ತದೆ. ವ್ಯರ್ಥ

ಸಮಾಪ್ತಿಯಾಗಿರುತ್ತದೆ ಏಕೆಂದರೆ ಎಲ್ಲಿ ಸಮರ್ಥವಿದೆಯೋ ಅಲ್ಲಿ ವ್ಯರ್ಥವಿರುವುದಕ್ಕೆ ಸಾಧ್ಯವಿಲ್ಲ. ಹೇಗೆ ಪ್ರಕಾಶ ಹಾಗು ಅಂಧಕಾರ ಜೊತೆ ಜೊತೆಯಲ್ಲಿ ಇರುವುದಿಲ್ಲವೋ. 'ಜ್ಞಾನ' ಪ್ರಕಾಶವಾಗಿದೆ. 'ವ್ಯರ್ಥ' ಅಂಧಕಾರವಾಗಿದೆ. ವರ್ತಮಾನ ಸಮಯ ವ್ಯರ್ಥವನ್ನು ಸಮಾಪ್ತಿ ಮಾಡುವುದರ ಕಡೆ ಗಮನವಿಡಬೇಕಾಗಿದೆ. ಎಲ್ಲದಕ್ಕಿಂತ ಮುಖ್ಯ ಮಾತು ಸಂಕಲ್ಪ ರೂಪಿ ಬೀಜವನ್ನು ಸಮರ್ಥವನ್ನಾಗಿ ಮಾಡಬೇಕಾಗಿದೆ. ಒಂದುವೇಳೆ ಸಂಕಲ್ಪ ರೂಪಿ ಬೀಜ ಸಮರ್ಥವಾಗಿದ್ದರೆ ಆಗ, ಕರ್ಮ ಸಂಬಂಧ ಸಹಜವಾಗಿ ಸಮರ್ಥವಾಗಿಯೇ ಬಿಡುತ್ತದೆ ಅಂದಾಗ ಜ್ಞಾನ ಸ್ವರೂಪ ಅರ್ಥಾತ್ ಪ್ರತಿ ಸಮಯ, ಪ್ರತಿ ಸಂಕಲ್ಪ, ಪ್ರತಿ ಸೆಕೆಂಡ್ ಸಮರ್ಥವಾಗಿದೆ.

ಯೋಗಿ ಅತ್ಮರಂತೂ ಎಲ್ಲರೂ ಆಗಿದ್ದೀರಿ ಆದರೆ ಪ್ರತಿ ಸಂಕಲ್ಪ ಸ್ವತಃ ಯೋಗಯುಕ್ತ ಯುಕ್ತಿಯುಕ್ತವಾಗಿರಬೇಕು. ಇದರಲ್ಲಿ ನಂಬರ್‌ವಾರ್ ಇದೆ. ಏಕೆ ನಂಬರ್ ತಯಾರಾಯಿತು? ವಿಧಾತಾ ಒಬ್ಬರಾಗಿದ್ದಾರೆ. ವಿಧಿ ಒಂದಾಗಿದೆ. ಆದರೂ ಸಹ ನಂಬರ್ ಏಕೆ? ಬಾಪ್‌ದಾದಾರವರು ನೋಡಿದರು ಯೋಗಿಗಳಂತೂ ಆಗುತ್ತಿದ್ದಾರೆ ಆದರೆ ಪ್ರಯೋಗಿಗಳು ಕಡಿಮೆ ಆಗುತ್ತಿದ್ದಾರೆ. ಯೋಗವನ್ನು ಮಾಡುವುದು ಹಾಗೂ ಮಾಡಿಸುವುದು ಎರೆಡರಲ್ಲಿ ಎಲ್ಲರೂ ಬುದ್ಧಿವಂತರಾಗಿದ್ದೀರಿ. ಯೋಗ ಮಾಡಿಸುವುದಕ್ಕೆ ಬರುವುದಿಲ್ಲ ಎನ್ನುವವರು ಯಾರಾದರೂ ಇದ್ದೀರಾ? ಹೇಗಾದರೆ ಯೋಗ ಮಾಡುವುದು ಮತ್ತು ಮಾಡಿಸುವುದರಲ್ಲಿ ಯೋಗ್ಯರಾಗಿದ್ದೀರೋ ಹಾಗೆಯೇ ಪ್ರಯೋಗ ಮಾಡುವುದರಲ್ಲಿ ಕೂಡ ಯೋಗ್ಯರಾಗಬೇಕು ಮತ್ತು ಇತರರನ್ನು ಯೋಗ್ಯರನ್ನಾಗಿ ತಯಾರು ಮಾಡಬೇಕು. ಇದನ್ನೇ ಯೋಗಿ ಜೀವನ ಅಥವಾ ಯೋಗಯುಕ್ತ ಜೀವನ ಎಂದು ಕರೆಯುತ್ತಾರೆ. ಈಗ ಪ್ರಯೋಗಿ ಜೀವನದ ಅವಶ್ಯಕತೆ ಇದೆ. ಯಾವ ಯೋಗದ ಪರಿಭಾಷೆಯನ್ನಾದರೆ ತಿಳಿದುಕೊಂಡಿದ್ದಿರೋ ಅಥವಾ ವರ್ಣನೆ ಮಾಡುತ್ತಿರುವಿರೋ ಆ ವಿಶೇಷತೆಗಳು ಪ್ರಯೋಗದಲ್ಲಿ ಬರುತ್ತಿವೆಯೇ ? ಮೊಟ್ಟಮೊದಲು ತಮ್ಮನ್ನು ತಾವು ಚೆಕ್ ಮಾಡಿಕೊಳ್ಳಬೇಕು. ತಮ್ಮ ಸಂಸ್ಕಾರದ ಪರಿವರ್ತನೆಯಲ್ಲಿ ಎಲ್ಲಿಯವರೆಗೆ ಪ್ರಯೋಗಿಯಾಗಿದ್ದೀರಿ. ಏಕೆಂದರೆ ತಮ್ಮೆಲ್ಲರ ಶ್ರೇಷ್ಠ ಸಂಸ್ಕಾರವೇ ಶ್ರೇಷ್ಠ ಪ್ರಪಂಚದ ರಚನೆಯ ಬುನಾದಿಯಾಗಿದೆ. ಒಂದುವೇಳೆ ತಳಪಾಯ ಶಕ್ತಿಶಾಲಿಯಾಗಿದ್ದರೆ ಅನ್ಯ ಎಲ್ಲಾ ಮಾತುಗಳು ಸ್ವತಃವಾಗಿ ಶಕ್ತಿಶಾಲಿಯಾಗಿ ಇರುತ್ತದೆ. ಇಲ್ಲಿ ನೋಡಿ ಸಂಸ್ಕಾರವು ಸಮಯಾನುಸಾರ ಎಲ್ಲಿಯೂ ಮೋಸ ಮಾಡುವುದಿಲ್ಲವೇ? ಶ್ರೇಷ್ಠ ಸಂಸ್ಕಾರವನ್ನು ಪರಿವರ್ತನೆ ಮಾಡುವಂತಹರು ಎಂತಹದ್ದೇ ವ್ಯಕ್ತಿಯಿರಬಹುದು, ವಸ್ತುವಿರಬಹುದು, ಪರಿಸ್ಥಿತಿಯಿರಬಹುದು. ಯೋಗದ ಪ್ರಯೋಗ ಮಾಡುವಂತಹ ಆತ್ಮರನ್ನು ಶ್ರೇಷ್ಠತೆಯಿಂದ ಸಾಧಾರಣತೆಯಲ್ಲಿ ತರಲು ಸಾಧ್ಯವಿಲ್ಲ. ಮಾತೇ ಈ ರೀತಿಯಿತ್ತು, ವ್ಯಕ್ತಿ ಈ ರೀತಿಯಿದ್ದರು. ವಾಯುಮಂಡಲವೇ ಈ ರೀತಿಯಿತ್ತು ಆ ಕಾರಣ ಶ್ರೇಷ್ಠ ಸಂಸ್ಕಾರವನ್ನು ಪರಿವರ್ತನೆ ಮಾಡಿ ಸಾಧಾರಣತೆ ಅಥವಾ ವ್ಯರ್ಥವನ್ನಾಗಿ ಮಾಡಿಬಿಟ್ಟವು ಎಂದರೆ ಅವರನ್ನು ಪ್ರಯೋಗಿ ಆತ್ಮ ಎಂದು ಕರೆಯುತ್ತಾರೆಯೇ? ಒಂದುವೇಳೆ ಸಮಯಕ್ಕೆ ಯೋಗದ, ಶಕ್ತಿಗಳ ಪ್ರಯೋಗವಾಗುವುದಿಲ್ಲವೆಂದರೆ ಇದಕ್ಕೆ ಏನೆಂದು ಹೇಳಲಾಗುತ್ತದೆ? ಮೊದಲು ಈ ತಳಪಾಯವನ್ನು ನೋಡಿ ಎಲ್ಲಿಯವರೆಗೆ ಸಮಯಕ್ಕೆ ಪ್ರಯೋಗಿಗಳಾಗಿದ್ದೇವೆಂದು? ಒಂದುವೇಳೆ ಸ್ವಯಂನ ಸಂಸ್ಕಾರವು ಪರಿವರ್ತನೆಯಾಗಿಲ್ಲವೆಂದರೆ ಪ್ರಪಂಚವನ್ನು ಹೊಸದಾಗಿ ಹೇಗೆ ಪರಿವರ್ತನೆ ಮಾಡಬಲ್ಲಿರಿ?

ಪ್ರಯೋಗಿ ಆತ್ಮರ ಮೊದಲ ಚಿಹ್ನೆಯಾಗಿದೆ - ಸಂಸ್ಕಾರಗಳ ಪ್ರಯೋಗದ ಮೇಲೆ ಸದಾ ವಿಜಯಿ. ಎರಡನೇ ಚಿಹ್ನೆಯಾಗಿದೆ ಪ್ರಕೃತಿಯ ಮುಖಾಂತರ ಬರುವಂತಹ ಪರಿಸ್ಥಿತಿಗಳ ಮೇಲೆ ಯೋಗದ ಪ್ರಯೋಗದ ಮುಖಾಂತರ ವಿಜಯಿ. ಸಮಯ ಪ್ರತಿ ಸಮಯ ಪ್ರಕೃತಿಯ ಏರುಪೇರು ಸಹ ಯೋಗಿ ಆತ್ಮರನ್ನು ತಮ್ಮ ಕಡೆ ಆಕರ್ಷಣೆ ಮಾಡುತ್ತವೆ. ಇಂತಹ ಸಮಯದಲ್ಲಿ ಯೋಗದ ವಿಧಿ ಪ್ರಯೋಗದಲ್ಲಿ ಬರುತ್ತದೆಯೇ? ಕೆಲವೊಮ್ಮೆ ಯೋಗಿ ಪುರುಷರಿಗೆ ಅಥವಾ ಪುರುಷೋತ್ತಮ ಆತ್ಮರಿಗೆ ಪ್ರಕೃತಿ ಪ್ರಭಾವಿತರನ್ನಾಗಿ ಮಾಡುವುದಿಲ್ಲವೇ? ಏಕೆಂದರೆ ಬ್ರಾಹ್ಮಣ ಆತ್ಮರು ಪುರುಷೋತ್ತಮ ಆತ್ಮರಾಗಿದ್ದೀರಿ. ಪ್ರಕೃತಿ ಪುರುಷೋತ್ತಮ ಆತ್ಮರ ದಾಸಿಯಾಗಿದೆ. ಮಾಲೀಕ, ದಾಸಿಯ ಪ್ರಭಾವದಲ್ಲಿ ಬಂದುಬಿಟ್ಟರೆ ಇದಕ್ಕೆ ಏನೆಂದು ಹೇಳಲಾಗುತ್ತದೆ? ಇತ್ತೀಚೆಗೆ ಪುರುಷೋತ್ತಮ ಆತ್ಮರಿಗೆ ಪ್ರಕೃತಿಯ ಸಾಧನಗಳು ಹಾಗೂ ಸಂರಕ್ಷಣೆಯ(ಸಾಲವೇಷನ್) ರೂಪದಲ್ಲಿ ಪ್ರಭಾವಿತರನ್ನಾಗಿ ಮಾಡುತ್ತಿದೆ. ಸಾಧನೆ ಅಥವಾ ಸಾಲವೇಷನ್ನಿನ ಆಧಾರದ ಮೇಲೆ ಯೋಗಿ ಜೀವನವಾಗಿದೆ. ಸಾಧನೆ ಅಥವಾ ಸಾಲವೇಷನ್ ಕಡಿಮೆಯಾದರೆ ಯೋಗಯುಕ್ತರಾಗುವುದರಲ್ಲೂ ಕಡಿಮೆ ಇದಕ್ಕೆ ಪ್ರಭಾವಿತರಾಗುವುದೆಂದು ಹೇಳಲಾಗುತ್ತದೆ. ಯೋಗಿ ಅಥವಾ ಪ್ರಯೋಗಿ ಆತ್ಮನ ಸಾಧನೆಯ ಮುಂದೆ ಸಾಧನಗಳು ಸ್ವತಃವಾಗಿ ಸ್ವಯಂ ಬರುತ್ತವೆ. ಸಾಧನೆ ಸಾಧನಗಳ ಮೇಲೆ ಆಧಾರವಾಗಿರಬಾರದು ಆದರೆ ಸಾಧನೆ ಸಾಧನಗಳನ್ನು ಸ್ವತಃವಾಗಿ ಆಧಾರ ಮಾಡಿಕೊಳ್ಳುತ್ತದೆ. ಇದಕ್ಕೇ ಪ್ರಯೋಗಿ ಆತ್ಮ ಎಂದು ಹೇಳಲಾಗುತ್ತದೆ. ಹಾಗಾದರೆ ಚೆಕ್ ಮಾಡಿಕೊಳ್ಳಿ ಸಂಸ್ಕಾರ ಪರಿವರ್ತನೆಯಲ್ಲಿ ವಿಜಯಿ ಹಾಗೂ ಪ್ರಕೃತಿಯ ಪ್ರಭಾವದ ಮೇಲೆ ವಿಜಯಿಯಾಗಿ ಎಲ್ಲಿಯವರೆಗೆ ಆಗಿದ್ದೀರಿ? ಮೂರನೇಯ ಚಿಹ್ನೆಯಾಗಿದೆ ವಿಕಾರಗಳ ಮೇಲೆ ವಿಜಯಿ. ಯೋಗಿ ಅಥವಾ ಪ್ರಯೋಗಿ ಆತ್ಮರ ಮುಂದೆ ಈ ಐದು ವಿಕಾರಗಳು ಎಂಬ ಸರ್ಪಗಳು ಕಂಠಹಾರವಾಗುತ್ತದೆ. ಅನ್ಯರಿಗೆ ವಿಷಭರಿತ ಸರ್ಪಗಳಾಗಿವೆ ಆದರೆ ತಾವು ಯೋಗಿ - ಪ್ರಯೋಗಿ ಆತ್ಮರಿಗಾಗಿ ಈ ಸರ್ಪ ಕಂಠಹಾರವಾಗಿಬಿಡುತ್ತದೆ. ತಾವು ಬ್ರಾಹ್ಮಣರ ಹಾಗೂ ಬ್ರಹ್ಮಾ ತಂದೆಯ ಆಶರೀರಿ ತಪಸ್ವಿ ಶಂಕರನ ಸ್ವರೂಪದ ಸ್ಮೃತಿಚಿಹ್ನೆಯನ್ನು ಈಗಲೂ ಸಹ ಭಕ್ತರು ಪೂಜೆ ಹಾಗು ಗಾಯನ(ಮಹಿಮೆ) ಮಾಡುತ್ತಾರೆ. ಎರಡನೇ ಸ್ಮೃತಿಚಿಹ್ನೆ - ಈ ಸರ್ಪಗಳು ನಿಮಗೆ ಯಾವ ರೀತಿ ಅಧೀನವಾಗುತ್ತವೆ ಎಂದರೆ ನೀವು ಖುಷಿಯಿಂದ ನಾಟ್ಯ ಮಾಡುವ ವೇದಿಕೆಯಾಗುತ್ತವೆ. ವಿಜಯೀ ಆದಾಗ ಏನು ಅನುಭವ ಮಾಡುತ್ತೀರಿ. ಯಾವ ಸ್ಥಿತಿ ಇರುತ್ತದೆ ಖುಷಿಯಿಂದ ನಾಟ್ಯವನ್ನು ಮಾಡುತ್ತಾ ಇರುತ್ತೀರಿ ತಾನೇ ಆ ಸ್ಥಿತಿಯನ್ನು ಅವರು ವೇದಿಕೆಯಂತೆ ತೋರಿಸಿದ್ದಾರೆ ಸ್ಥಿತಿಯನ್ನು ಕೂಡ ವೇದಿಕೆ ಎಂದು ಕರೆಯುತ್ತಾರೆ. ಹೀಗೆ ವಿಕಾರಗಳ ಮೇಲೆ ವಿಜಯೀ ಆದವರನ್ನೇ ಪ್ರಯೋಗಿ ಎಂದು ಕರೆಯುತ್ತಾರೆ. ಆದ್ದರಿಂದ ಎಲ್ಲಿಯವರೆಗೆ ಪ್ರಯೋಗಿಯಾಗಿದ್ದೇನೆ ಎಂದು ಪರಿಶೀಲಿಸಿಕೊಳ್ಳಿರಿ. ಒಂದುವೇಳೆ ಸಮಯಕ್ಕೆ ಯೋಗದ ಪ್ರಯೋಗವನ್ನು ಮಾಡಲಿಲ್ಲ ಅಥವಾ ಯೋಗದದ ವಿಧಿಯಿಂದ ಸಮಯಕ್ಕೆ ಸಿದ್ಧಿಯಿಲ್ಲವೆಂದರೆ ಯಥಾರ್ಥ ವಿಧಿ ಎಂದು ಹೇಳಲಾಗುತ್ತದೆಯೇ? ಸಮಯ ತನ್ನ ತೀವ್ರ ಗತಿಯನ್ನು ಸಮಯಾನುಸಾರ ತೋರಿಸುತ್ತದೆ. ಅನೇಕತೆ, ಅಧರ್ಮ, ತಮೋಪ್ರಧಾನತೆ ಪ್ರತಿಯೊಂದು ಕ್ಷೇತ್ರದಲ್ಲಿ ತೀವ್ರಗತಿಯಿಂದ ವೃದ್ಧಿಯಾಗುತ್ತಾ ಹೋಗುತ್ತಿದೆ. ಇಂತಹ ಸಮಯದಲ್ಲಿ ತಮ್ಮ ಯೋಗದ ವಿಧಿಯ ವೃದ್ಧಿ ಅಥವಾ ವಿಧಿಯ ಸಿದ್ಧಿಯಲ್ಲಿ ವೃದ್ಧಿಯು ತೀವ್ರಗತಿಯಿಂದ ಮಾಡುವ ಅವಶ್ಯಕತೆಯಿದೆ. ನಂಬರ್ ಮುಂದೆವರೆಯುವಂತಹ ಆಧಾರ - ಪ್ರಯೋಗಿಯಾಗುವ ಸಹಜ ವಿಧಿ. ಬಾಪ್ ದಾದಾರವರು ಏನು ನೋಡಿದರೆಂದರೆ ಸಮಯಕ್ಕೆ ಪ್ರಯೋಗ ಮಾಡುವುದರಲ್ಲಿ ತೀವ್ರಗತಿಯ ಬದಲಾಗಿ ಸಾಧಾರಣ ಗತಿಯಲ್ಲಿದ್ದೀರಿ. ಈಗ ಗತಿಯನ್ನು

ಹೆಚ್ಚಿಸಿಕೊಳ್ಳಿ. ಆಗ ಏನಾಗುವುದು? ಸಿದ್ಧಿ ಸ್ವರೂಪವನ್ನು ಅನುಭವ ಮಾಡುತ್ತಾ ಹೋಗುತ್ತೀರಿ. ತಮ್ಮ ಜಡ ಚಿತ್ರಗಳ ಮುಖಾಂತರ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಅನುಭವವನ್ನು ಮಾಡುತ್ತಿದ್ದಾರೆ. ಚೈತನ್ಯದಲ್ಲಿ ಸಿದ್ಧಿ ಸ್ವರೂಪರಾಗಿದ್ದೀರಿ ಆಗಲೇ ಸ್ಮೃತಿಚಿಹ್ನೆ ಎಂಬುದು  ನಡೆಯುತ್ತಾ ಬಂದಿದೆ. ರಿದ್ಧಿ-ಸಿದ್ಧಿಯವರಂತು(ಮಂತ್ರತಂತ್ರ) ಅಲ್ಲ. ವಿಧಿಯಿಂದ ಸಿದ್ಧಿ. ತಿಳಿಯಿತೇ ಏನು ಮಾಡಬೇಕೆಂದು? ಎಲ್ಲವೂ ಇದೆ ಆದರೆ ಆ ಸಮಯಕ್ಕೆ ಪ್ರಯೋಗ ಮಾಡುವುದು ಹಾಗೂ ಪ್ರಯೋಗ ಸಫಲ ಮಾಡುವುದು ಇವರನ್ನೇ ಜ್ಞಾನ ಸ್ವರೂಪ ಆತ್ಮರು ಎಂದು ಕರೆಯಲಾಗುತ್ತದೆ. ಇಂತಹ ಜ್ಞಾನ ಸ್ವರೂಪ ಆತ್ಮರೇ ಅತಿ ಸಮೀಪ ಹಾಗು ಅತಿ ಪ್ರಿಯರಾಗಿದ್ದಾರೆ. ಒಳ್ಳೆಯದು.

**ಸದಾ ಯೋಗದ ವಿಧಿಯ ಮುಖಾಂತರ ಶ್ರೇಷ್ಠ ಸಿದ್ಧಿಯನ್ನು ಅನುಭವ ಮಾಡುವಂತಹ, ಸದಾ ಸಾಧಾರಣ ಸಂಸ್ಕಾರವನ್ನು ಶ್ರೇಷ್ಠ ಸಂಸ್ಕಾರದಲ್ಲಿ ಪರಿವರ್ತನೆ ಮಾಡುವಂತಹ, ಸದಾ ಪ್ರಕೃತಿಜೀತ್, ವಿಕಾರಗಳ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ವಿಜಯೀ ಆತ್ಮರಿಗೆ, ಸದಾ ಪ್ರಯೋಗದ ಗತಿಯನ್ನು ತೀವ್ರ ಅನುಭವ ಮಾಡುವಂತಹ ಜ್ಞಾನ ಸ್ವರೂಪ, ಯೋಗಯುಕ್ತ ಯೋಗಿ ಆತ್ಮರಿಗೆ ಬಾಪ್ ದಾದಾರವರ ನೆನಪು ಪ್ರೀತಿ ಹಾಗು ನಮಸ್ತೆ.**

**24 ನವಂಬರ್‌ನಲ್ಲಿ ಇಬ್ಬರು ಕುಮಾರಿಯರ ಸಮರ್ಪಣೆ ಸಮಾರೋಹದ ನಂತರ ರಾತ್ರಿ ಹತ್ತು ಗಂಟೆಗೆ ಆಲ್ ರೌಂಡರ್ ದಾದಿಜೀಯವರು ತಮ್ಮ ಹಳೆಯ ಶರೀರವನ್ನು ಬಿಟ್ಟು ಬಾಪ್ ದಾದಾರವರ ಮಡಿಲನ್ನು ಸೇರಿದರು. 25ನೇ ತಾರೀಖು ಮಧ್ಯಾಹ್ನದಲ್ಲಿ ಅವರ ಅಂತಿಮ ಸಂಸ್ಕಾರವನ್ನು ಮಾಡಲಾಯಿತು. ಸಾಯಂಕಾಲ ಮುರಳಿಯ ನಂತರ ದಾದಿಜೀಯವರೊಂದಿಗೆ ಮಿಲನ ಮಾಡುವ ಸಮಯ ಬಾಪ್ ದಾದಾರವರು ಯಾವ ಮಹಾವಾಕ್ಯಗಳನ್ನು ಉಚ್ಚರಣೆ ಮಾಡಿದರು ಅದು ಈ ಪ್ರಕಾರವಾಗಿದೆ**

ಆಟದಲ್ಲಿ ಭಿನ್ನ-ಭಿನ್ನ ಆಟವನ್ನು ನೋಡುತ್ತಿರುತ್ತಿರಲ್ಲವೇ. ಸಾಕ್ಷಿಯಾಗಿ ಆಟವನ್ನು ನೋಡುವುದರಲ್ಲಿ ಮಜಾ ಬರುತ್ತದೆಯಲ್ಲವೇ. ಭಲೇ ಯಾವುದೇ ಉತ್ಸವವಿರಬಹುದು. ಭಲೇ ಯಾರೇ ಶರೀರ ಬಿಟ್ಟುಬಿಡಲಿ, ಇದೂ ಸಹ ಏನೆನಿಸುತ್ತದೆ? ಆಟದಲ್ಲಿ ಆಟವೆನಿಸುತ್ತದೆ. ಹಾಗು ಇದೇ ರೀತಿ ಅನಿಸುತ್ತದೆಯಲ್ಲವೇ. ಹೇಗೆ ಆಟವಿರುತ್ತದೆ ಹಾಗು ಸಮಯದ ಪ್ರಮಾಣ ಸಮಾಪ್ತಿಯಾಗಿ ಬಿಡುತ್ತದೆ. ಇದರಂತೆ ಏನಾಯಿತು ಸಹಜ ಸಮಾಪ್ತಿಯಾಯಿತೆಂದರೆ ಆಟವೇ ಅನಿಸುತ್ತದೆ. ಪ್ರತಿ ಆತ್ಮದ ತಮ್ಮ-ತಮ್ಮದೇ ಪಾತ್ರವಿರುತ್ತದೆ. ಸರ್ವ ಆತ್ಮರ ಪ್ರತಿ ಶುಭ ಭಾವನೆ ಅನೇಕ ಆತ್ಮರ ಶುಭಭಾವನೆ ಪ್ರಾಪ್ತಿಯಾಗುವುದು ಸಹ ಪ್ರತಿ ಆತ್ಮನ ಭಾಗ್ಯದ ಸಿದ್ಧಿಯಾಗಿದೆ ಹಾಗಾದರೆ ಏನಾಯಿತು, ಏನು ನೋಡಿದಿರಿ? ಆಟವನ್ನು ನೋಡಿದ್ದೀರಾ ಅಥವಾ ಮೃತ್ಯುವನ್ನು ನೋಡಿದ್ದೀರಾ? ಒಂದು ಕಡೆ ಅದೇ ಅಲೌಕಿಕ ಸ್ವಯಂ ವರವನ್ನು ನೋಡಿದ್ದೀರಿ ಮತ್ತು ಇನ್ನೊಂದು ಕಡೆ ಶರೀರ ಬದಲಾವಣೆಯ ಆಟವನ್ನು ನೋಡಿದ್ದೀರಿ. ಆದರೆ ಎರಡು ಏನೆನಿಸುತು? ಆಟದಲ್ಲಿ ಆಟ. ವ್ಯತ್ಯಾಸವಾಗುತ್ತದೆಯಲ್ಲವೇ? ಸ್ಥಿತಿಯಲ್ಲಿ ವ್ಯತ್ಯಾಸವಾಗುತ್ತದೆಯೇ ಅಲೌಕಿಕ ಸ್ವಯಂವರವನ್ನು ನೋಡುವುದರಲ್ಲಿ ಶರೀರ ಬದಲಾವಣೆಯಾಗುವುದನ್ನು ನೋಡುವುದರಲ್ಲಿ ವ್ಯತ್ಯಾಸ ಕಂಡುಬಂದಿತೇ? ಸ್ವಲ್ಪ  ಬದಲಾವಣೆ ಕಂಡುಬಂದಿತೇ ಅಥವಾ ಇಲ್ಲವೇ? ಸಾಕ್ಷಿಯಾಗಿ ಆಟವನ್ನು ನೋಡಿದಾಗ ಅಥವಾ ತಮ್ಮ ವಿಧಿಯಿಂದ ಹಾಗು ಅವರು ತಮ್ಮ

ವಿಧಿಯಿಂದ ಸಹಜ ನಷ್ಟಮೋಹಿಗಳಾಗುವುದು ಇದು ಬಹಳ ಕಾಲದ ಯೋಗದ ವಿಧಿಯ ಸಿದ್ಧಿಯಾಗಿದೆ. ನಷ್ಟಮೋಹ, ಸಹಜ ಮೃತ್ಯುವಿನ ಆಟವನ್ನು ನೋಡಿದ್ದೀರಿ. ಈ ಆಟದ ಯಾವ ರಹಸ್ಯವನ್ನು ನೋಡಿದ್ದೀರಿ? ದೇಹದ ಸ್ಮೃತಿಯಿಂದ ಉಪರಾಮ. ಭಲೇ ವ್ಯಾಧಿಯ ಮುಖಾಂತರ, ಭಲೇ ವಿಧಿಯ ಮುಖಾಂತರ ಹಾಗೂ ಯಾವುದೇ ಆಕರ್ಷಣೆ ಅಂತಿಮ ಸಮಯದಲ್ಲಿ ಆಕರ್ಷಿಸಬಾರದು. ಇದಕ್ಕೇ ಸಹಜವಾಗಿ ಶರೀರವನ್ನು ಬದಲಾವಗೆ ಮಾಡುವುದೆಂದು ಹೇಳಲಾಗುತ್ತದೆ. ಹಾಗಾದರೆ ಏನು ಮಾಡಬೇಕು? ನಷ್ಟಮೋಹ, ಸೆಂಟರ್ ಸಹ ನೆನಪಿಗೆ ಬರಬಾರದು. (ಟೀಚರ್ಸ್‌ನ್ನು ನೋಡುತ್ತಾ) ಈ ರೀತಿಯಲ್ಲಿ ಯಾವುದೇ ವಿದ್ಯಾರ್ಥಿಗಳು ನೆನಪಿಗೆ ಬಂದರೆ, ಯಾವುದೇ ಸೆಂಟರ್ನ ವಸ್ತು ನೆನಪಿಗೆ ಬಂದರೆ, ಯಾವುದೇ ದೂರ ಮಾಡಿರುವಂತಹದ್ದು ನೆನಪಿಗೆ ಬಂದರೆ.... ಎಲ್ಲರಿಗಿಂತ ಭಿನ್ನ ಹಾಗು ತಂದೆಗೆ ಪ್ರಿಯ. ಮೊದಲಿನಿಂದಲೇ ದೂರವಾಗಿಬಿಟ್ಟಿದ್ದೀರಲ್ಲವೇ. ಯಾವುದೇ ಆಶ್ರಯವನ್ನು ಮಾಡಿಕೊಳ್ಳಬಾರದು. ಕೇವಲ ಗುರಿ ಮಾತ್ರ ಹಾಗೂ ಯಾವುದೇ ಸೆಳೆತವಿರಬಾರದು, ಒಳ್ಳೆಯದು.

**ನಿರ್ಮಲಶಾಂತಿ ದಾದಾಜೀಯ ವರೊಂದಿಗೆ ಮಿಲನ: -**

ಸಂಘಟನೆ ಇಷ್ಟವಾಗುತ್ತದೆಯಲ್ಲವೇ? ಸಂಘಟನೆಯ ವಿಶೇಷ ಶೋಭೆಯಾಗಿದ್ದೀರಿ. ಎಲ್ಲರ ದೃಷ್ಟಿ ಎಷ್ಟು ಪ್ರೀತಿಯಿಂದ ತಮ್ಮೆಲ್ಲರ ಕಡೆಗೆ ಹೋಗುತ್ತದೆ. ಎಲ್ಲಿಯವರೆಗೆ ಎಷ್ಟು ಸೇವೆ ಇದೆ ಅಷ್ಟೇ ಸೇವೆ ಶರೀರದ ಮುಖಾಂತರ ಆಗಲೇ ಬೇಕಾಗಿದೆ. ಹೇಗಾದರೂ ಮಾಡಿ ಶರೀರ ನಡೆಯುತ್ತಲೇ ಇದೆ ಶರೀರವನ್ನು ನಡೆಸುವಂತಹ ವಿಧಿ ಬಂದಿತಲ್ಲವೇ. ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ ಏಕೆಂದರೆ ತಂದೆ ಹಾಗು ಎಲ್ಲರ ಆಶೀರ್ವಾದ ಇದೆ. ಖುಷಿಯಾಗಿರಬೇಕು ಹಾಗು ಖುಷಿಯನ್ನು ಹಂಚಬೇಕು ಮತ್ತಿನೇನು ಕೆಲಸವಿದೆ. ಎಲ್ಲರೂ ನೋಡಿ ನೋಡಿ ಎಷ್ಟೊಂದು ಖುಷಿಯಾಗುತ್ತರೆಂದರೆ ಖುಷಿಯನ್ನು ಹಂಚುತ್ತಿದ್ದೀರಲ್ಲವೇ. ತಿನ್ನುತ್ತಿದ್ದೀರಿ. ಹಂಚುತ್ತಿದ್ದೀರಿ. ತಾವೆಲ್ಲರೂ ಒಂದೊಂದು ದರ್ಶನೀಯ ಮೂರ್ತಿಗಳಾಗಿದ್ದೀರಿ. ಎಲ್ಲರ ದೃಷ್ಟಿ ನಿಮಿತ್ತ ಆತ್ಮರ ಕಡೆಗೆ ಹೋಗುತ್ತದೆ ಎಂದರೆ ದರ್ಶನೀಯ ಮೂರ್ತಿಗಳಾಗಿದ್ದೀರಲ್ಲವೇ. ಒಳ್ಳೆಯದು

**ಅವ್ಯಕ್ತ ಬಾಪ್‌ದಾದಾರವರ ಪರ್ಸನಲ್ ಮಿಲನ:-**

1.ಬ್ರಾಹ್ಮಣ ಜೀವನದ ಆಧಾರ - ನೆನಪು ಹಾಗು ಸೇವೆ:- ಡ್ರಾಮಾಅನುಸಾರ ಬ್ರಾಹ್ಮಣ ಜೀವನದಲ್ಲಿ ಎಲ್ಲರಿಗೆ ಸೇವೆಯ ಚಾನ್ಸ್ ಸಿಕ್ಕಿದೆಯಲ್ಲವೇ ಏಕೆಂದರೆ ಬ್ರಾಹ್ಮಣ ಜೀವನದ ಆಧಾರವಾಗಿದೆ. ನೆನಪು ಮತ್ತು ಸೇವೆ. ಒಂದುವೇಳೆ ನೆನಪು ಹಾಗು ಸೇವೆ ನಿರ್ಬಲವಾಗಿದ್ದರೆ ಹೇಗೆ ಶರೀರದ ಆಧಾರ ನಿರ್ಬಲವಾಗಿಬಿಟ್ಟರೆ ಶರೀರ ಔಷಧಿಗಳಿಂದ ನಡೆಯುತ್ತದೆಯಲ್ಲವೇ ಬ್ರಾಹ್ಮಣ ಜೀವನದಲ್ಲೂ ಒಂದುವೇಳೆ ನೆನಪು ಮತ್ತು ಸೇವೆಯ ಆಧಾರ ಶಕ್ತಿಶಾಲಿಯಾಗಿಲ್ಲದ್ದಿದ್ದರೆ, ನಿರ್ಬಲವಾಗಿದ್ದರೆ ಆ ಬ್ರಾಹ್ಮಣ ಜೀವನದಲ್ಲೂ ಕೆಲವೊಮ್ಮೆ ತೀವ್ರವಾಗಿ ನಡೆಯುತ್ತದೆ. ಕೆಲವೊಮ್ಮೆ ಸಡಿಲವಾಗಿ ನಡೆಯುತ್ತವೆ. ಕೆಲವೊಮ್ಮೆ ಬಲವಂತದಿಂದ ನಡೆಯುತ್ತದೆ. ಯಾರದಾದರೂ ಸಹಯೋಗ ಸಿಗಲಿ, ಯಾರದಾದರೂ ಜೊತೆ ಸಿಗಲಿ, ಕೆಲವೊಂದು ಅವಕಾಶ ಸಿಕ್ಕರೆ ನಡೆಯುತ್ತೇವೆ. ಇಲ್ಲದ್ದಿದ್ದರೆ ಸಡಿಲವರಾಗಿ ಬಿಡುತ್ತೇವೆ. ಆ ಕಾರಣ ನೆನಪು ಮತ್ತು ಸೇವೆಯ ವಿಶೇಷ ಆಧಾರ ಸದಾ ಶಕ್ತಿಶಾಲಿಯಾಗಿರಬೇಕು. ಎರಡೂ ಶಕ್ತಿಶಾಲಿಯಾಗಿರಲಿ, ಸೇವೆ ಬಹಳಷ್ಟು ಇದೆ. ನೆನಪು ನಿರ್ಬಲವಾಗಿದೆ. ಅಥವಾ ನೆನಪು ಬಹಳ ಚೆನ್ನಾಗಿದೆ. ಸೇವೆ ನಿರ್ಬಲವಾಗಿದ್ದರೂ ಸಹ ತೀವ್ರಗತಿಯಾಗುವುದಕ್ಕೆ ಸಾಧ್ಯವಿಲ್ಲ. ನೆನಪು ಹಾಗು

ಸೇವೆಯಲ್ಲಿ ತೀವ್ರಗತಿಯಿರಬೇಕು. ಶಕ್ತಿಶಾಲಿಯಾಗಿರಬೇಕು. ಎರಡೂ ಶಕ್ತಿಶಾಲಿಯಾಗಿದೆಯೇ ಅಥವಾ ವ್ಯತ್ಯಾಸವಾಗಿ ಬಿಡುತ್ತದೆಯೇ? ಕೆಲವೊಮ್ಮೆ ಸೇವೆ ಜಾಸ್ತಿಯಾಗಿಬಿಡುತ್ತದೆ, ಕೆಲವೊಮ್ಮೆ ನೆನಪು ಜಾಸ್ತಿಯಾಗಿಬಿಡುತ್ತದೆಯೇ? ಎರಡು ಜೊತೆ ಜೊತೆಯಲ್ಲಿರಬೇಕು  ಸ್ಮೃತಿ ಮತ್ತು ನಿಸ್ವಾರ್ಥ ಸೇವೆ, ಸ್ವಾರ್ಥದ ಸೇವೆಯಲ್ಲ, ನಿಸ್ವಾರ್ಥದ ಸೇವೆಯಾಗಿದ್ದರೆ ಮಾಯಾಜೀತ್‍ರಾಗುವುದು ಬಹಳ ಸಹಜವಾಗಿದೆ. ಪ್ರತಿಯೊಂದು ಕರ್ಮದಲ್ಲಿ, ಕರ್ಮದ ಸಮಾಪ್ತಿಯ ಮೊದಲು ಸದಾ ವಿಜಯಿಯಾಗುವುದು ಕಂಡು ಬರುತ್ತದೆ, ವಿಜಯ ಆಗಿಬಿಟ್ಟಿದೆ ಎಂದು ಅಚಲ ನಿಶ್ಚಯದ ಅನುಭವವಾಗುತ್ತದೆ. ಒಂದುವೇಳೆ ಬ್ರಾಹ್ಮಣ ಆತ್ಮರ ವಿಜಯವಾಗುವುದಿಲ್ಲದಿದ್ದರೆ ಇನ್ಯಾರದು ಆಗುತ್ತದೆ? ಕ್ಷತ್ರಿಯರದ್ದು ಆಗುತ್ತದೆಯೋ? ಬ್ರಾಹ್ಮಣರ ವಿಜಯವಲ್ಲವೇ. ಪ್ರಶ್ನೆಗಳು ಇರುವುದಿಲ್ಲ. ಮಾಡುತ್ತಿದ್ದೀರಲ್ಲವೇ, ನಡೆಯುತ್ತಿದ್ದರಲ್ಲವೇ. ನೋಡಿ ಬಿಡುವೆವು, ಆಗಿಬಿಡುತ್ತದೆ, ಆಗಲೇಬೇಕಲ್ಲವೇ.. ಈ ಶಬ್ದ ಬರುವುದಿಲ್ಲ. ಏನಾಗುತ್ತದೆಯೇ ಗೊತ್ತಿಲ್ಲ, ಆಗುತ್ತದೆಯೋ ಅಥವಾ ಆಗುವುದಿಲ್ಲವೋ.. ಈ ನಿಶ್ಚಯದ ಮಾತಿದೆಯೇ? ನಿಶ್ಚಯಬುದ್ಧಿ ವಿಜಯಂತಿ ಈ ಗಾಯನವಿದೆಯಲ್ಲವೇ? ಯಾವಾಗ ಪ್ರಾಕ್ಟಿಕಲ್ ಆಗಿದೆ ಆಗಲೇ ಗಾಯನವಿದೆಯಲ್ಲವೇ, ನಿಶ್ಚಯಬುದ್ಧಿಯ ಚಿಹ್ನೆಯಾಗಿದೆ ವಿಜಯ ನಿಶ್ಚಿತ.

ಹೇಗೆ ಯಾವುದೇ ಪ್ರಕಾರದಲ್ಲಿ ಯಾರಿಗಾದರೂ ಶಕ್ತಿಯಿದೆಯೆಂದರೆ ಭಲೇ ಧನದಿರಬಹುದು, ಬುದ್ಧಿಯದಿರಬಹುದು, ಸಂಬಂಧ ಸಂಪರ್ಕದಿರಬಹುದು. ಅವರಿಗೆ ನಿಶ್ಚಯವಿರುತ್ತದೆ ಇದೇನು ದೊಡ್ಡ ಮಾತೆಂದು. ಇದು ಯಾವುದೇ ಮಾತಲ್ಲ. ತಮ್ಮ ಹತ್ತಿರ ಎಲ್ಲಾ ಶಕ್ತಿಗಳಿದೆ. ಧನದ ಶಕ್ತಿಯಿದೆಯೇ ಅಥವಾ ಧನದ ಶಕ್ತಿ ಕೋಟ್ಯಾಧಿಪತಿಗಳ ಹತ್ತಿರ ಇದೆಯೇ? ಎಲ್ಲದಕ್ಕಿಂತ ದೊಡ್ಡ ಧನವಾಗಿದೆ ಅವಿನಾಶಿ ಧನ ಯಾವುದು ಸದಾ ಜೊತೆಯಲ್ಲಿರುತ್ತದೆ. ಧನದ ಶಕ್ತಿಯು ಸಹ ಆಗಿದೆ. ಬುದ್ಧಿಯ ಶಕ್ತಿಯು ಸಹ ಇದೆ. ಪದವಿ ಶಕ್ತಿಯು ಸಹ ಆಗಿದೆ. ಯಾವುದೆಲ್ಲ ಶಕ್ತಿಗಳ ಗಾಯನವಿದೆ ಎಲ್ಲಾ ಶಕ್ತಿಗಳು ತಮ್ಮಲ್ಲಿದೆ. ಇದೆಯೇ ಅಥವಾ ಪ್ರಾಯಲೋಪವಾಗಿ ಬಿಡುತ್ತದೆಯೇ? ಇದನ್ನು ಇಮರ್ಜ ರೂಪದಲ್ಲಿ ಅನುಭವ ಮಾಡಿ. ಈ ರೀತಿಯಲ್ಲ ಹಾಂ, ಹೂಂ ಸರ್ವಶಕ್ತಿವಂತನ ಮಗು ಆದರೆ ಅನುಭವವಾಗುವುದಿಲ್ಲ ಎಲ್ಲರೂ ಸಂಪನ್ನರಾಗಿದ್ದೀರಾ ಸ್ವಲ್ಪ ಸ್ವಲ್ಪ ಖಾಲಿಯಿದ್ದೀರಾ? ಸಮಯಕ್ಕೆ ವಿಧಿಯ ಮುಖಾಂತರ ಸಿದ್ಧಿ ಪ್ರಾಪ್ತಿಯಾಗಬೇಕು. ಈ ರೀತಿಯಲ್ಲ ಸಮಯದಲ್ಲಿ ಆಗುವುದಿಲ್ಲ ಮತ್ತು ಅದರಂತೆ ನಶೆಯಿರಬೇಕು. ಬಹಳ ಶಕ್ತಿಗಳಿದೆಯೆಂದು. ಎಂದು ತಮ್ಮ ಶಕ್ತಿಗಳನ್ನು ಮರೆಯಬಾರದು. ಉಪಯೋಗಿಸುತ್ತಾ ಹೋಗಬೇಕು. ಒಂದುವೇಳೆ ಸ್ವಯಂನ ಪ್ರತಿ ಕಾರ್ಯದಲ್ಲಿ ತೊಡಗಿಸುವುದಕ್ಕೆ ಬರುತ್ತದೆಯೆಂದರೆ ಅನ್ಯರ ಕಾರ್ಯದಲ್ಲೂ ತೊಡಗಿಸಬಹುದು. ಪಾಂಡವರಲ್ಲಿ ಶಕ್ತಿ ಬಂದಿದೆಯಲ್ಲವೇ ಅಥವಾ ಕೆಲವೊಮ್ಮೆ ಕ್ರೋಧ ಬರುತ್ತದೆಯೇ? ಸ್ವಲ್ಪ ಸ್ವಲ್ಪ ಕ್ರೋಧ ಬರುತ್ತದೆಯೇ? ಯಾರಾದರೂ ಕೋಪ ಮಾಡಿಕೊಂಡರೆ ಕೋಪ ಬರುತ್ತದೆಯೇ, ಯಾರಾದರೂ ಅವಮಾನ ಮಾಡಿದರೆ ಕ್ರೋಧ ಬರುತ್ತದೆಯೇ? ಇದಂತು ಹೀಗಾಯಿತು ಹೇಗೆ ಶತ್ರು ಬರುತ್ತಾರೆಂದರೆ ಸೋಲಾಗುತ್ತದೆ. ಮಾತೆಯರಿಗೆ ಸ್ವಲ್ಪ ಸ್ವಲ್ಪ ಮೋಹ ಬರುತ್ತದೆಯೇ? ಪಾಂಡವರಿಗೆ ತಮ್ಮ ಪ್ರತಿ ಕಲ್ಪದ ವಿಜಯತನದ ಸದಾ ಖುಷಿ ಇಮರ್ಜ್ ಆಗಿರಬೇಕು. ಎಂದಿಗೂ ಯಾವುದೇ ಪಾಂಡವರನ್ನು ನೆನಪಿಸಿಕೊಂಡರೆ ಪಾಂಡವ ಶಬ್ದದಿಂದಲೇ ವಿಜಯ ಎದುರಿಗೆ ಬರುತ್ತದೆಯಲ್ಲವೇ ಪಾಂಡವ ಅರ್ಥಾತ್ ವಿಜಯಿ. ಪಾಂಡವರ ಕಥೆಯ ರಹಸ್ಯ ಏನಾಗಿದೆ? ವಿಜಯವಾಗಿದೆಯಲ್ಲವೇ. ಅಂದಮೇಲೆ ಪ್ರತಿ ಕಲ್ಪದ ವಿಜಯಿ. ಇಮರ್ಜ ರೂಪದಲ್ಲಿ ನಶೆಯಿರಲಿ. ಮರ್ಜ್ ಅಲ್ಲ, ಒಳ್ಳೆಯದು.

2.ಸರ್ವರ ಮೂಲಕ ಮಾನ್ಯತೆ ಪ್ರಾಪ್ತಿ ಮಾಡಲು ನಿರ್ಮಾಣರಾಗಿರಿ:- ಎಲ್ಲರೂ ತಮ್ಮನ್ನು ತಾವು ಕೋಟಿಯಲ್ಲಿ ಕೆಲವರು ಹಾಗು ಕೆಲವರಲ್ಲಿ ಕೆಲವರು ಶ್ರೇಷ್ಠ ಆತ್ಮ ಅನುಭವ ಮಾಡುತ್ತಿರಾ? ಅಥವಾ ಕೊಟಿಯಲ್ಲಿ ಕೆಲವರೆಂದು ಗಾಯನ ಮಾಡುವುದು ಅದು ಬೇರೆ ಯಾರಿಗೋ? ಅಥವಾ ನಿಮಗೋ? ಅಂದಮೇಲೆ ಒಂದೊಂದು ಅತ್ಮನ ಮಹತ್ವವಿದೆ ಅರ್ಥಾತ್ ಪ್ರತಿ ಅತ್ಮ ಮಹಾನ್ ಆಗಿದೆ. ಹೇಗೆ ವೃಕ್ಷಕ್ಕಾಗಿ ಹೇಳುತ್ತಾರೆ ಎಷ್ಟು ಸಂಪನ್ನವಾಗಿರುವುದೋ ಅಷ್ಟು ಮಹಾನಾಗಿರುವುದು ಹಾಗು ನಿರ್ಮಾನತೆಯೇ ಸೇವೆ ಮಾಡುತ್ತದೆ. ಹೇಗೆ ವೃಕ್ಷದ ಬಾಗುವಿಕೆ ಸೇವೆ ಮಾಡುತ್ತದೆ. ಒಂದುವೇಳೆ ಬಾಗಿರುವುದಿಲ್ಲ ಎಂದರೆ ಸೇವೆ ಮಾಡುವುದಿಲ್ಲ. ಒಂದುಕಡೆ ಮಹಾನತೆ ಇದೆ ಹಾಗು ಇನ್ನೊಂದು ಕಡೆ ನಿರ್ಮಾಣತೆ ಇದೆ. ಹಾಗು ಯಾರು ನಿರ್ಮಾಣರಾಗಿರುತ್ತಾರೆಯೋ ಅವರು ಸರ್ವರ ಮೂಲಕ ಮಾನ್ಯತೆಯನ್ನು ಪಡೆಯುತ್ತಾರೆ. ಸ್ವಯಂ ನಿರ್ಮಾಣರಾದರೆ ಅನ್ಯರು ಮಾನ್ಯತೆ ಕೊಡುತ್ತಾರೆ. ಯಾರು ಅಭಿಮಾನದಲ್ಲಿ ಇರುತ್ತಾರೆಯೋ ಅವರು ಮಾನ್ಯತೆ ಕೊಡುವುದಿಲ್ಲ ಅವರಿಂದ ದೂರ ಓಡುತ್ತಾರೆ. ಹಾಗಾದರೆ ಮಾಹಾನ್ ಹಾಗು ನಿರ್ಮಾಣರಾಗಿದ್ದೀರೋ ಅಥವಾ ಇಲ್ಲವೋ ಇದರ ಚಿಹ್ನೆಯಾಗಿದೆ - ನಿರ್ಮಾಣರು ಎಲ್ಲರಿಗೂ ಸುಖವನ್ನು ಕೊಡುತ್ತಾರೆ ಎಲ್ಲೇ ಹೋದರು. ಏನೇ ಮಾಡಿದರು ಅದು ಸುಖದಾಯಿಯಾಗಿರುವುದು. ಇದರಿಂದ ಚೆಕ್ ಮಾಡಿ ಎಷ್ಟು ಮಹಾನ್ ಆಗಿದ್ದೇವೆ? ಯಾರೇ ಸಂಬಂಧ ಸಂಪರ್ಕದಲ್ಲಿ ಬಂದರೂ ದುಃಖದ ಅನುಭವ ಮಾಡುವುದಿಲ್ಲ, ಈ ರೀತಿಯಿದೆಯೋ ಅಥವಾ ಕೆಲವೊಮ್ಮೆ ದುಃಖವು ಸಿಕ್ಕಿಬಿಡುತ್ತದೆಯೋ? ನಿರ್ಮಾಣತೆ ಕಡಿಮೆ ಇದ್ದರೆ ಸುಖವು ಸಹ ಸದಾ ಕೊಡಲು ಸಾಧ್ಯವಿಲ್ಲ. ಅಂದಮೇಲೆ ಸದಾ ಸುಖ ಕೊಡುತ್ತಾ, ಸುಖ ಪಡೆಯುತ್ತಾ ಅಥವಾ ಕೆಲವೊಮ್ಮೆ ದುಃಖ' ಕೊಡುತ್ತಾ, ದುಃಖ ಪಡೆಯುತ್ತಾ ಇರುತ್ತೀರೋ? ಒಂದುವೇಳೆ ಕೊಡುವುದಿಲ್ಲ ಆದರೆ ತೆಗೆದುಕೊಂಡು ಬಿಡುತ್ತಿರೋ? ಸ್ವಲ್ಪ ಫೀಲ್ ಆಗುತ್ತದೆ ಎಂದರೆ ತೆಗೆದುಕೊಂಡು ಬಿಟ್ಟಂತಾಯಿತು ಅಲ್ಲವೇ, ಒಂದುವೇಳೆ ಯಾರದೇ ಯಾವುದೇ ಮಾತಿನಿಂದ ಫೀಲ್ ಆಗುತ್ತದೆ ಎಂದರೆ ಇದಕ್ಕೆ ಹೇಳಲಾಗುವುದು ದುಃಖ ತೆಗೆದುಕೊಳ್ಳುವುದು ಎಂದು. ಆದರೆ ಯಾರೋ ಕೊಟ್ಟರು ಆದರೆ ನೀವು ತೆಗೆದುಕೊಳ್ಳುವುದಿಲ್ಲ ಇದಂತು ನಿಮ್ಮ ಮೇಲಿದ ಅಲ್ಲವೇ. ಯಾರ ಹತ್ತಿರ ದುಃಖವೇ ಇದೆ ಅವರು ಬೇರೆ ಏನು ಕೊಡಲು ಸಾಧ್ಯ? ದುಃಖವನ್ನೇ ಕೊಡುತ್ತಾರಲ್ಲವೇ? ಆದರೆ ನಿಮ್ಮ ಕೆಲಸವಾಗಿದೆ ಸುಖ ತೆಗೆದುಕೊಳ್ಳುವುದು ಹಾಗು ಸುಖ ಕೊಡುವುದು. ಹೀಗಲ್ಲ ಯಾರೋ ದುಃಖ ಕೊಡುತ್ತಿದ್ದಾರೆಂದರೆ ಹೇಳುತ್ತೀರಿ ನಾನೇನು ಮಾಡಲಿ? ನಾನು ಕೊಡಲಿಲ್ಲ ಆದರೆ ಅವರು ಕೊಟ್ಟರು. ನೀವು ನಿರ್ಣಯ ಮಾಡಬೇಕು ಯಾವುದನ್ನು ತೆಗೆದುಕೊಳ್ಳಬೇಕು ಯಾವುದನ್ನು ಬಿಡಬೇಕು. ತೆಗೆದುಕೊಳ್ಳುವುದರಲ್ಲಿಯೂ ಬುದ್ಧಿವಂತಿಕೆ ಬೇಕಲ್ಲವೇ. ಆದ್ದರಿಂದಲೇ ಬ್ರಾಹ್ಮಣ ಆತ್ಮರ ಗಾಯನವಿದೆ ಸುಖದ ಸಾಗರನ ಮಕ್ಕಳು, ಸುಖ ಸ್ವರೂಪ ಸುಖದೇವಾ ಆಗಿದ್ದಾರೆಂದು. ಸುಖ ಸ್ವರೂಪ ಸುಖ ದೇವಾ ಆತ್ಮರಾಗಿದ್ದೀರಿ. ದುಃಖದ ಪ್ರಪಂಚ ಬಿಟ್ಟುಬಿಟ್ಟಿದ್ದೀರಿ, ಪಾರು ಮಾಡಿ ಬಿಟ್ಟಿದ್ದೀರೋ ಅಥವಾ ಒಂದು ಕಾಲು ದುಃಖಧಾಮದಲ್ಲಿದೆ, ಇನ್ನೊಂದು ಕಾಲು ಸಂಗಮದಲ್ಲಿದೆಯೋ? ಹೀಗಂತು ಇಲ್ಲವಲ್ಲ - ಸ್ವಲ್ಪ ಸ್ವಲ್ಪ ಅಲ್ಲಿ ಬುದ್ಧಿ ಉಳಿದುಕೊಂಡು ಬಿಟ್ಟಿದೆ? ಕಾಲು ಇಲ್ಲ ಆದರೆ ಸ್ವಲ್ಪ ಬೆರಳು ಉಳಿದುಬಿಟ್ಟಿದೆ? ಯಾವಾಗ ದುಃಖಧಾಮವನ್ನು ಬಿಟ್ಟು ಹೋಗಿದ್ದೀರಿ ಅಂದಮೇಲೆ ದುಃಖವನ್ನು ಕೊಡಲು ಬಾರದು ತೆಗೆದುಕೊಳ್ಳಲುಬಾರದು. ಒಳ್ಳೆಯದು.

ರಿವೈಸ್ ಕೋರ್ಸ್ 25-11-1993

***ಸಹಜ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಲು ಜ್ಞಾನ ಸ್ವರೂಪ ಯೋಗಿ ಆತ್ಮರಾಗಿ***

ಯೋಗಿಗಳಂತೂ ಆಗುತ್ತಿದ್ದಾರೆ, ಆದರೆ ಪ್ರಯೋಗಿಗಳು ಕಡಿಮೆ ಆಗುತ್ತಿದ್ದಾರೆ. ಯೋಗ ಮಾಡುವುದು ಮತ್ತು ಮಾಡಿಸುವುದರಲ್ಲಿ ಎಷ್ಟು ಯೋಗ್ಯರಾಗಿದ್ದೀರೋ ಹಾಗೆಯೇ ಪ್ರಯೋಗ ಮಾಡಿ, ಮಾಡಿಸುವುದರಲ್ಲಿ ಕೂಡ ಯೋಗ್ಯರಾಗಬೇಕು ಇದನ್ನೇ ಯೋಗಿ ಜೀವನ ಅಥವಾ ಯೋಗಯುಕ್ತ ಜೀವನ ಎಂದು ಕರೆಯುತ್ತಾರೆ. ಮೊಟ್ಟ ಮೊದಲು ತಮ್ಮನ್ನು ತಾವು ಚೆಕ್ ಮಾಡಿಕೊಳ್ಳಬೇಕು ತಮ್ಮ ಸಂಸ್ಕಾರದ ಪರಿವರ್ತನೆಯಲ್ಲಿ ಎಲ್ಲಿಯವರೆಗೆ ಪ್ರಯೋಗಿಯಾಗಿದ್ದೀರಿ ಎಂದು, ಏಕೆಂದರೆ ತಮ್ಮೆಲ್ಲರ ಶ್ರೇಷ್ಠ ಸಂಸ್ಕಾರವೇ ಶ್ರೇಷ್ಠ ಪ್ರಪಂಚದ ರಚನೆಯ ಬುನಾದಿಯಾಗಿದೆ. ಸಂಸ್ಕಾರವನ್ನು ಪರಿವರ್ತನೆ ಮಾಡುವಂತಹವರು ಎಂತಹದ್ದೇ ವ್ಯಕ್ತಿ, ವಸ್ತು, ಪರಿಸ್ಥಿತಿಯಿಂದ ಸಾಧಾರಣತೆಯಲ್ಲಿ ಬರಲು ಸಾಧ್ಯವಿಲ್ಲ ಮಾತೇ ಈ ರೀತಿ ಇತ್ತು, ವ್ಯಕ್ತಿ ಈ ರೀತಿ ಇದ್ದರು, ವಾಯುಮಂಡಲವೇ ಈ ರೀತಿ ಇತ್ತು, ಆ ಕಾರಣ ಶ್ರೇಷ್ಠ ಸಂಸ್ಕಾರವನ್ನು ಪರಿವರ್ತನೆ ಮಾಡಿ ಸಾಧಾರಣ ಅಥವಾ ವ್ಯರ್ಥವನ್ನಾಗಿ ಮಾಡಿಬಿಟ್ಟೆವು ಎಂದು ಹೇಳುವುದಿಲ್ಲ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜ್ಞಾನ ಸ್ವರೂಪ ಹಾಗೂ ಪ್ರತೀಕರ್ಮದಲ್ಲಿ ಯೋಗಯುಕ್ತ, ಯುಕ್ತಿ ಯುಕ್ತವಾಗಿರುವ ಸ್ವತಃ ಹಾಗೂ ಸದಾಕಾಲದ ಯೋಗಿ.

2. ನನ್ನ ಪ್ರತಿಯೊಂದು ಸಂಕಲ್ಪ, ಮಾತು ಮತ್ತು ಕರ್ಮ ಸಮರ್ಥವಾಗಿ ಇದೆ .

3. ನಾನು ಯೋಗದ ಪ್ರಯೋಗದಿಂದ ಸಂಸ್ಕಾರಗಳ ಪರಿವರ್ತನೆ ಮಾಡಿಕೊಂಡು ಪ್ರಪಂಚವನ್ನು ಹೊಸದಾಗಿ ಸೃಷ್ಟಿ ಮಾಡಿದ್ದೇನೆ.

4. ನನ್ನ ಯೋಗ ಪ್ರಯೋಗದಿಂದ ಯಾವುದೇ ವ್ಯಕ್ತಿ, ಪರಿಸ್ಥಿತಿ, ವಾಯುಮಂಡಲ ನನ್ನ ಶ್ರೇಷ್ಠತೆಯನ್ನು ಸಾಧಾರಣಕ್ಕೆ ತರಲು ಸಾಧ್ಯವಿಲ್ಲ.

5. ನಾನು ಸಮಯಾನುಸಾರ ಯೋಗದ ಶಕ್ತಿಯನ್ನು ಪ್ರಯೋಗದಲ್ಲಿ ತರುವ ಪ್ರಯೋಗಿ ಆತ್ಮ.

6. ನಾನು ಸಂಸ್ಕಾರಗಳ ಮೇಲೆ , ಪ್ರಕೃತಿಯ ಮುಖಾಂತರ ಬರುವ ಪರಿಸ್ಥಿತಿಗಳ ಮತ್ತು ವಿಕಾರಗಳ ಮೇಲೆ ಯೋಗದ ಪ್ರಯೋಗವನ್ನು ಮಾಡಿ ವಿಜಯವನ್ನು ಪಡೆದಿರುವಂತಹ ವಿಜಯೀ ಸ್ವರೂಪ, ಪ್ರಕೃತಿಜೀತ್ ಸ್ವರೂಪ.

7. ಬ್ರಾಹ್ಮಣತ್ಮನಾದ ನಾನು ಪುರುಷೋತ್ತಮನು ಮತ್ತು ನನಗೆ ಪ್ರಕೃತಿ ದಾಸಿಯಾಗಿ ಸೇವೆಯನ್ನು ಮಾಡುತ್ತಿದೆ.

8. ನನ್ನ ಸಾಧನೆಯ ಆಧಾರದಿಂದ ಸಾಧನಗಳು ಸ್ವತಹವಾಗಿ ನನ್ನ ಹತ್ತಿರ ಬರುತ್ತಿವೆ. (ಸಾಧನಗಳನ್ನು ಸೇವೆಗಾಗಿ ಉಪಯೋಗಿಸಬೇಕು ಯೋಗಕ್ಕಾಗಿ ಅಲ್ಲ.)

9. ನಾನು ಪಂಚ ವಿಕಾರಗಳೆಂಬ ಸರ್ಪಗಳನ್ನು ಕಂಠಹಾರವನ್ನಾಗಿ ಮಾಡಿಕೊಂಡು ವಿಜಯಿ ಆಗಿ ಸ್ಥಿತಿ ಎಂಬ ವೇದಿಕೆಯ ಮೇಲೆ ನಾಟ್ಯವನ್ನು ಮಾಡುತ್ತಿರುವ ಯೋಗಿ, ಪ್ರಯೋಗಿ.

10. ನಾನು ಸಮಯದ ವೃದ್ಧಿಯ ತೀವ್ರ ಗತಿಗಿಂತಲೂ ನನ್ನ ಯೋಗದ ವಿಧಿಯ ಗತಿಯನ್ನು ತೀವ್ರಗತಿಯಿಂದ ವೃದ್ಧಿ ಮಾಡಿಕೊಳ್ಳುತ್ತಿದ್ದೇನೆ.

11. ನಾನು ಸಮಯಾನುಸಾರ ಯೋಗದ ವಿಧಿಯನ್ನು ಪ್ರಯೋಗ ಮಾಡಿ ಸಿದ್ಧಿಯನ್ನು, ಸಫಲತೆಯನ್ನು ಪಡೆದು ತಂದೆಗೆ ಅತಿ ಸಮೀಪ ಮತ್ತು ಅತಿಪ್ರಿಯವಾಗಿರುವ ಜ್ಞಾನ ಸ್ವರೂಪ.